# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 309
2. ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ
3. ಉತ್ತರಿಸಬೇಕಾದ ದಿನಾಂಕ :29.01.2026.
4. ಉತ್ತರಿಸುವ ಸಚಿವರು : ಮಾನ್ಯ ಸಣ್ಣ ನೀರಾವರಿ, ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು.

| ಕ್ರ ಸ | ಪ್ರಶ್ನೆ | ಉತ್ತರ |
|---|---|---|
| ಅ. | ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ಕರಾವಳಿ ತೀರ ಪ್ರದೇಶದಲ್ಲಿರುವ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸಮುದ್ರದ ಉಪ್ಪು ನೀರಿನ ಒಳಹರಿವು ತಡೆಗಟ್ಟಲು ಸಣ್ಣ ನೀರಾವರಿ ಇಲಾಖೆಯಿಂದ ಇದುವರೆಗೆ ಕೈಗೊಳ್ಳಲಾಗಿರುವ ಯೋಜನೆಗಳು ಯಾವುವು: (ವಿವಿರ ನೀಡುವುದು); | ಕಳೆದ 2 ವರ್ಷಗಳಲ್ಲಿ ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿನ ಕರಾವಳಿ ತೀರ ಪ್ರದೇಶದಲ್ಲಿರುವ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸಮುದ್ರದ ಉಪ್ಪು ನೀರಿನ ಒಳಹರಿವು ತಡೆಗಟ್ಟಲು ಸಣ್ಣ ನೀರಾವರಿ ಇಲಾಖೆಯಿಂದ 4702-ಪಶ್ಚಿಮವಾಹಿನಿ/ಅಣೆಕಟ್ಟು ಮತ್ತು ಪಿಕಪ್ ಯೋಜನೆಯಡಿ ಉಪ್ಪು ನೀರು ತಡೆ ಅಣೆಕಟ್ಟು ನಿರ್ಮಾಣ ಹಾಗೂ 4702-ಪಶ್ಚಿಮವಾಹಿನಿ ಖಾರ್‌ಲ್ಯಾಂಡ್ ಯೋಜನೆಯಡಿ ಒಟ್ಟು 23 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ವಿವರಗಳನ್ನು ಅನುಬಂಧದ-2 ನೀಡಲಾಗಿದೆ. |
| ಆ. | ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಉಪ್ಪು ನೀರಿನ ಒಳಹರಿವು ತಡೆಗಟ್ಟುವ ಉದ್ದೇಶದಿಂದ ಉಪ್ಪು ನೀರು ತಡೆಗೋಡೆ/ಚೆಕ್‌ಡ್ಯಾಂ/ಬಂಡ್‌ಗಳ ನಿರ್ಮಾಣಕ್ಕೆ ಕೈಗೊಂಡಿರುವ ಕಾಮಗಾರಿಗಳ ಸಂಖ್ಯೆ ಎಷ್ಟು; | |
| ಇ. | ಇವುಗಳಲ್ಲಿ ಪೂರ್ಣಗೊಂಡ ಕಾಮಗಾರಿಗಳು ಹಾಗೂ ಪ್ರಗತಿಯಲ್ಲಿರುವ ಕಾಮಗಾರಿಗಳು ಯಾವುವು; ಇನ್ನೂ ಪ್ರಾರಂಭವಾಗದೇ ಬಾಕಿ ಕಾಮಗಾರಿಗಳ ಸಂಖ್ಯೆ ಎಷ್ಟು; ಮತ್ತು ಅವು ಬಾಕಿಯೀರಲು ಕಾರಣಗಳೇನು; | ಒಟ್ಟು 23 ಕಾಮಗಾರಿಗಳಲ್ಲಿ 16 ಕಾಮಗಾರಿಗಳು ಪೂರ್ಣಗೊಂಡಿದ್ದು, 7 ಕಾಮಗಾರಿಗಳು ಪ್ರಗತಿಯಲ್ಲಿವೆ. |
| ಈ. | ಉಪ್ಪು ನೀರಿನ ಒಳಹರಿವಿನಿಂದಾಗಿ ಕರಾವಳಿ ಪ್ರದೇಶದ ರೈತರ ಕೃಷಿ ಚಟುವಟುಕೆಗಳಿಗೆ ತೀವ್ರ ತೊಂದರೆ ಉಂಟಾಗಿ ಅಪಾರ ಪ್ರಮಾಣದ ಕೃಷಿ ಭೂಮಿ ನಿಷ್ಪ್ರಯೋಜಕವಾಗಿ ಬಿದ್ದಿರುವ ವಿಷಯ ಸರ್ಕಾರದ ಗ್ರಮನಕ್ಕೆ ಬಂದಿದೆಯೇ; ಇದರಿಂದ ಉಂಟಾಗಿರುವ ಕೃಷಿ ನಷ್ಟವನ್ನು ತಗ್ಗಿಸಲು ಇದುವರೆಗೆ ಕೈಗೊಂಡ | ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಉಪ್ಪು ನೀರಿನ ಒಳಹರಿವಿನಿಂದಾಗಿ ಕೃಷಿ ಭೂಮಿ ಲವಣಯುಕ್ತವಾಗಿ ನಿಷ್ಪ್ರಯೋಜಕವಾಗುವುದನ್ನು ತಪ್ಪಿಸಲು ಅವಶ್ಯಕತೆ ಹಾಗೂ ಅನುದಾನದ ಲಭ್ಯತೆಗನುಗುಣವಾಗಿ ಉಪ್ಪು ನೀರು ತಡೆ ಅಣೆಕಟ್ಟು/ಖಾರ್‌ಲ್ಯಾಂಡ್ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. |

| | | |
|---|---|---|
| | ಕ್ರಮಗಳೇನು; | |
| ಉ. | ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ಕರಾವಳಿ ಪ್ರದೇಶಗಳಲ್ಲಿ ಉಪ್ಪು ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಸರ್ಕಾರ ಸಮಗ್ರ ಹಾಗೂ ದೀರ್ಘಕಾಲೀನ ವಿಶೇಷ ಯೋಜನೆ ರೂಪಿಸುವುದನ್ನು ಪರಿಗಣಿಸಿರುವುದೇ; ಇದಲ್ಲಿ, ಆ ಯೋಜನೆಯನ್ನು ಯಾವ ಅವಧಿಯಲ್ಲಿ ಅನುಷ್ಠಾನಗೊಳಿಸಲಾಗುವುದು ಹಾಗೂ ಅದಕ್ಕೆ ನಿಗದಿಪಡಿಸಿರುವ ಅಂದಾಜು ವೆಚ್ಚ ಎಷ್ಟು? | ಕರ್ನಾಟಕ ರಾಜ್ಯದ ಕರಾವಳಿ ಪ್ರದೇಶದಲ್ಲಿ ಹರಿಯುವ ನದಿಗಳಿಗೆ ಖಾರ್ ಲ್ಯಾಂಡ್ ಯೋಜನೆಯಡಿ ಸಮಗ್ರ ಮಾಸ್ಟರ್ ಪ್ಲಾನ್ ಯೋಜನೆಯ ವರದಿಯನ್ನು ರೂ.1500.00 ಕೋಟಿ ಅಂದಾಜು ಮೊತ್ತದಲ್ಲಿ ಸಿದ್ಧಪಡಿಸಲಾಗಿರುತ್ತದೆ. 2021-22ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 96 ರಲ್ಲಿ "ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದ ನದಿಗಳಲ್ಲಿ ಪ್ರವಾಹ ಉಂಟಾದಾಗ ಮತ್ತು ಭಾರಿ ಅಲೆಗಳಿಂದಾಗಿ ಉಪ್ಪುನೀರು ಹಿಮ್ಮುಖವಾಗಿ ನುಗ್ಗುವುದನ್ನು Flap Gate ಮುಖಾಂತರ ತಡೆಗಟ್ಟುವ ಖಾರಲ್ಯಾಂಡ್ ಯೋಜನೆಯನ್ನು ರೂ.300.00 ಕೋಟಿಗಳ ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ" ಎಂದು ಘೋಷಿಸಲಾಗಿದೆ. ಅದರಂತೆ 2021-22ನೇ ಸಾಲಿನಲ್ಲಿ ಉತ್ತರ ಕನ್ನಡ ಜಿಲ್ಲೆಗೆ ರೂ.300.00 ಕೋಟಿ ಅಂದಾಜು ಮೊತ್ತದ ಕಾಮಗಾರಿಗಳ ಕ್ರಿಯಾಯೋಜನೆಗೆ ಅನುಮೋದನೆ ನೀಡಲಾಗಿರುತ್ತದೆ. 2022-23ನೇ ಸಾಲಿನಲ್ಲಿ ಯೋಜನೆಯ ಎರಡನೇ ಹಂತದಲ್ಲಿ ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಿಗೆ ರೂ.300.00 ಕೋಟಿ ಅಂದಾಜು ಮೊತ್ತದ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿರುತ್ತದೆ.<br><br>ಸದರಿ ಎರಡನೇ ಹಂತದಲ್ಲಿ ರೂ.50.00 ಕೋಟಿ ಅಂದಾಜು ಮೊತ್ತದಲ್ಲಿ ಮಂಗಳೂರು ವಿಭಾಗಕ್ಕೆ 15 ಕಾಮಗಾರಿಗಳು ಮಂಜೂರಾಗಿದ್ದು, ಸದರಿ ಕಾಮಗಾರಿಗಳು ಕರಾವಳಿ ನಿಯಂತ್ರಣ ವಲಯದ ವ್ಯಾಪ್ತಿಯಲ್ಲಿ ಬರುವುದರಿಂದ ಕರಾವಳಿ ನಿಯಂತ್ರಣ ವಲಯದ ನಿರಾಕ್ಷೇಪಣಾ ಪತ್ರ ಪಡೆದು ಕಾಮಗಾರಿಗಳನ್ನು ಪ್ರಾರಂಭಿಸಲಾಗಿದ್ದು, 8 ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. 5 ಕಾಮಗಾರಿಗಳು ಪ್ರಗತಿಯಲ್ಲಿದೆ. 2 ಕಾಮಗಾರಿಗಳು ಕರಾವಳಿ ನಿಯಂತ್ರಣ ವಲಯ ವ್ಯಾಪ್ತಿಗೆ ಬರುವುದರಿಂದ ಖಾರ್‌ಲ್ಯಾಂಡ್ ಕಾಮಗಾರಿಗಳ ಬದಲಿಗೆ ನದಿದಂಡೆ ಸಂರಕ್ಷಣಾ ಕಾಮಗಾರಿಗಳು ಅನುಮೋದನೆಗೊಂಡಿದ್ದು, ಪ್ರಸ್ತುತ ಟೆಂಡರ್ ಹಂತದಲ್ಲಿದೆ. |

MID/5/LCQ/2026

**(ಎನ್.ಎಸ್. ಬೋಸರಾಜು)**
ಸಣ್ಣ ನೀರಾವರಿ, ಹಾಗೂ ವಿಜ್ಞಾನ
ಮತ್ತು ತಂತ್ರಜ್ಞಾನ ಸಚಿವರು.

**ಶ್ರೀ ಶ್ರೀ ಮಂಜುನಾಥ್ ಭಂಡಾರಿ ಮಾನ್ಯ ವಿಧಾನಸಭಾ ಪರಿಷತ್ತಿನವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 274 (309) ಕ್ಕೆ ಅನುಬಂಧ**

**ಕಳೆದ 2 ವರ್ಷಗಳಲ್ಲಿ ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಉಪ್ಪು ನೀರಿನ ಒಳಹರಿವು ತಡೆಗಟ್ಟಲು ನಿರ್ಮಿಸಿದ ಉಪ್ಪು ನೀರು ತಡೆ ಅಣೆಕಟ್ಟು/ಖಾರ್‌ಲ್ಯಾಂಡ್ ಕಾಮಗಾರಿಗಳ ವಿವರಗಳು**

**ಘೋಶ್ವಾರೆ**

ರೂ.ಲಕ್ಷಗಳಲ್ಲಿ

| ಕ್ರ.ಸಂ. | ವರ್ಷ | ಜಿಲ್ಲೆ | ಕಾಮಗಾರಿಗಳ ಸಂಖ್ಯೆ | ಅಂದಾಜು ಮೊತ್ತ | ವೆಚ್ಚ | | | | ಒಟ್ಟು ವೆಚ್ಚ (8+9+10+11) | ಕಾಮಗಾರಿಯ ಹಂತ | | ಷರಾ |
|---|---|---|---|---|---|---|---|---|---|---|---|---|
| | | | | | ಮಾರ್ಚ್ 2023ರ ವರೆಗಿನ ವೆಚ್ಚ | 2023-24 | 2024-25 | 2025-26 (ಜುಲೈ ಅಂತ್ಯದವರೆಗೆ) | | ಪೂರ್ಣಗೊಂಡಿದೆ | ಪ್ರಗತಿಯಲ್ಲಿದೆ | |
| **1** | **2** | **3** | **6** | **7** | **8** | **9** | **10** | **11** | **12** | **13** | **14** | **15** |
| 1 | 2023-24ನೇ ಸಾಲಿಗೆ ಮುಂದುವರಿದ ಕಾಮಗಾರಿಗಳು | ದಕ್ಷಿಣ ಕನ್ನಡ | 5 | 24162.61 | 22554.20 | 505.69 | 736.02 | 231.92 | 24027.83 | 3 | 2 | |
| 2 | | ಉಡುಪಿ | 18 | 41704.80 | 11365.06 | 3427.64 | 2965.34 | 958.71 | 18716.74 | 13 | 5 | |
| | | **ಒಟ್ಟು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆ** | **23** | **65867.41** | **33919.26** | **3933.33** | **3701.36** | **1190.63** | **42744.57** | **16** | **7** | |
| 1 | 2023-24ನೇ ಸಾಲಿಗೆ ಹೊಸ ಕಾಮಗಾರಿಗಳು | ಯಾವುದೂ ಇರುವುದಿಲ್ಲ. | | | | | | | | | | |
| 2 | 2024-25ನೇ ಸಾಲಿಗೆ ಹೊಸ ಕಾಮಗಾರಿಗಳು | ಯಾವುದೂ ಇರುವುದಿಲ್ಲ. | | | | | | | | | | |

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)ಇವರ ಪ್ರಶ್ನೆ ಸಂಖ್ಯೆ: 274 (309) ಕ್ಕೆ ಅನುಬಂಧ

ಕಳೆದ 2 ವರ್ಷಗಳಲ್ಲಿ ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಉಪ್ಪು ನೀರಿನ ಒಳಹರಿವು ತಡೆಗಟ್ಟಲು ನಿರ್ಮಿಸಿದ ಉಪ್ಪು ನೀರು ತಡೆ ಅಣೆಕಟ್ಟು/ಖಾರ್‌ಲ್ಯಾಂಡ್ ಕಾಮಗಾರಿಗಳ ವಿವರಗಳು

ರೂ.ಲಕ್ಷಗಳಲ್ಲಿ

| ಕ್ರ.ಸಂ. | ಜಿಲ್ಲೆ | ವಿಧಾನಸಭಾ ಕ್ಷೇತ್ರ | ಲೆಕ್ಕಶೀರ್ಷಿಕೆ | ಕಾಮಗಾರಿ ಹೆಸರು | ಅಂದಾಜು ಮೊತ್ತ | ವೆಚ್ಚ | | | | ಒಟ್ಟು ವೆಚ್ಚ (7+8+9+10) | ಕಾಮಗಾರಿಯ ಹಂತ | | ಷರಾ |
|---|---|---|---|---|---|---|---|---|---|---|---|---|---|
| | | | | | | ಮಾರ್ಚ್-2023 ರವರೆಗೆ | 2023-24 | 2024-25 | 2025-26 (ಡಿಸೆಂಬರ್ ಅಂತ್ಯದವರೆಗೆ) | | ಪೂರ್ಣಗೊಂಡಿದೆ | ಪ್ರಗತಿಯಲ್ಲಿದೆ | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 |
| 2023-24 ನೇ ಸಾಲಿಗೆ ಮುಂದುವರಿದ ಕಾಮಗಾರಿಗಳು | | | | | | | | | | | | | |
| 1 | ದಕ್ಷಿಣ ಕನ್ನಡ | ಮಂಗಳೂರು | 4702-00-101-5-02-139 ಪಶ್ಚಿಮವಾಹಿನಿ ಯೋಜನೆ | ಹರೇಕಳ ಎಂಬಲ್ಲಿ ನೇತ್ರಾವತಿ ನದಿಗೆ ಸೇತುವೆ ಸಹಿತ ಉಪ್ಪು ನೀರು ತಡೆ ಕಿಂಡಿಅಣೆಕಟ್ಟು ನಿರ್ಮಾಣ | 21562.61 | 22554.20 | 494.65 | 5.10 | | 23053.95 | ಪೂರ್ಣಗೊಂಡಿದೆ | | |
| 2 | ದಕ್ಷಿಣ ಕನ್ನಡ | ಮಂಗಳೂರು | 4702-00-101-5-02-139 ಪಶ್ಚಿಮವಾಹಿನಿ ಯೋಜನೆ- ಖಾರ್‌ಲ್ಯಾಂಡ್ ನಿರ್ಮಾಣ | ದಕ್ಷಿಣ ಕನ್ನಡ ಜಿಲ್ಲೆ, ಉಳ್ಳಾಲ ತಾಲೂಕು ಹರೇಕಳ ಗ್ರಾಮದ ಹರೇಕಳ ಕಡವಿನ ಬಳಿ ನೇತ್ರಾವತಿ ಎಡದಂಡೆ ಖಾರ್ ಲ್ಯಾಂಡ್ ನಿರ್ಮಾಣ ಕಾಮಗಾರಿ. | 600.00 | | 10.84 | 357.00 | 228.99 | 596.83 | ಪೂರ್ಣಗೊಂಡಿದೆ | | |
| 3 | ದಕ್ಷಿಣ ಕನ್ನಡ | ಮಂಗಳೂರು(ಉ) | 4702-00-101-5-02-139 ಪಶ್ಚಿಮವಾಹಿನಿ ಯೋಜನೆ- ಖಾರ್‌ಲ್ಯಾಂಡ್ ನಿರ್ಮಾಣ | ಮಂಗಳೂರು ತಾಲೂಕಿನ ದಂಬೆಲ್ ಕಿರು ಸೇತುವೆಯಿಂದ ದಂಬೆಲ್ ಕೊನೆಯವರೆಗೆ 4ನೇ ಮೈಲು ತನಕ ಖಾರ್ ಲ್ಯಾಂಡ್ ನಿರ್ಮಾಣ ಕಾಮಗಾರಿ. | 600.00 | | 0.07 | 0.00 | 2.93 | 3.00 | | ಪ್ರಗತಿಯಲ್ಲಿದೆ | |
| 4 | ದಕ್ಷಿಣ ಕನ್ನಡ | ಮಂಗಳೂರು (ದ) | 4702-00-101-5-02-139 ಪಶ್ಚಿಮವಾಹಿನಿ ಯೋಜನೆ- ಖಾರ್‌ಲ್ಯಾಂಡ್ ನಿರ್ಮಾಣ | ಮಂಗಳೂರು ತಾಲೂಕಿನ ಕಣ್ಣೂರಿನಿಂದ ಬಜಾಲ್ ತನಕ ನೇತ್ರಾವತಿ ನದಿಯ ಖಾರ್ ಲ್ಯಾಂಡ್ ನಿರ್ಮಾಣ ಕಾಮಗಾರಿ. | 800.00 | | 0.13 | 370.99 | | 371.12 | ಪೂರ್ಣಗೊಂಡಿದೆ | | |
| 5 | ದಕ್ಷಿಣ ಕನ್ನಡ | ಮುಲ್ಕಿ-ಮೂಡಬಿದ್ರೆ | 4702-00-101-5-02-139 ಪಶ್ಚಿಮವಾಹಿನಿ ಯೋಜನೆ- ಖಾರ್‌ಲ್ಯಾಂಡ್ ನಿರ್ಮಾಣ | ಮಂಗಳೂರು ತಾಲೂಕಿನ ಹಳೆಯಂಗಡಿ ಗ್ರಾಮದ ಕರಿತೋಟ ಎಂಬಲ್ಲಿ ಖಾರ್ ಲ್ಯಾಂಡ್ ನಿರ್ಮಾಣ ಕಾಮಗಾರಿ. | 600.00 | | 0.00 | 2.93 | | 2.93 | | ಪ್ರಗತಿಯಲ್ಲಿದೆ | |
| 5 | | | | ಒಟ್ಟು ದಕ್ಷಿಣ ಕನ್ನಡ ಜಿಲ್ಲೆ | 24162.61 | 22554.20 | 505.69 | 736.02 | 231.92 | 24027.83 | 3 | 2 | |
| 1 | ಉಡುಪಿ | ಕಾಪು | 4702-00-101-5-02-139 ಪಶ್ಚಿಮವಾಹಿನಿ ಯೋಜನೆ | ಕುರ್ಕಾಲು ಗ್ರಾಮದ ಕುರ್ಕಾಲು ಉಪ್ಪುನೀರು ತಡೆ ಅಣೆಕಟ್ಟು ಪುನರ್ ನಿರ್ಮಾಣ | 754.27 | 727.51 | 0.00 | 0.00 | 26.04 | 753.55 | ಪೂರ್ಣಗೊಂಡಿದೆ | | |
| 2 | ಉಡುಪಿ | ಕಾಪು | 4702-00-101-5-02-139 ಪಶ್ಚಿಮವಾಹಿನಿ ಯೋಜನೆ | ಪಡುಬಿದ್ರಿ ಗ್ರಾಮದ ನಡ್ಸಾಲು ಎಂಬಲ್ಲಿ ಉಪ್ಪುನೀರು ತಡೆ ಅಣೆಕಟ್ಟು ಪುನರ್ ನಿರ್ಮಾಣ | 350.53 | 275.86 | 49.64 | 0.00 | 23.18 | 348.68 | ಪೂರ್ಣಗೊಂಡಿದೆ | | |
| 3 | ಉಡುಪಿ | ಕಾಪು | 4702-00-101-5-02-139 ಪಶ್ಚಿಮವಾಹಿನಿ ಯೋಜನೆ | ಇನ್ನಂಜೆ ಗ್ರಾಮಪಂಚಾಯತ್ ಪಾಂಗಾಳ ಗ್ರಾಮದ ಸೇತುವೆ ಬಳಿ ಉಪ್ಪು ನೀರು ತಡೆ ಅಣೆಕಟ್ಟು ನಿರ್ಮಾಣ. | 200.00 | 192.31 | 30.01 | | | 222.32 | ಪೂರ್ಣಗೊಂಡಿದೆ | | |
| 4 | ಉಡುಪಿ | ಕಾಪು | 4702-00-101-5-02-139 ಪಶ್ಚಿಮವಾಹಿನಿ ಯೋಜನೆ- ಖಾರ್‌ಲ್ಯಾಂಡ್ ನಿರ್ಮಾಣ | ಉದ್ಯಾವರ ಗ್ರಾಮ ಪಂಚಾಯತ್ ವ್ಯಾಪ್ತಿಯ ಪಿತ್ರೋಡಿ ಗ್ರಾಮದಲ್ಲಿ ಉದ್ಯಾವರ ನದಿಗೆ ಖಾರ್‌ಲ್ಯಾಂಡ್ ನಿರ್ಮಾಣ ಕಾಮಗಾರಿ. | 600.00 | | 0.08 | 28.42 | | 28.50 | ಪೂರ್ಣಗೊಂಡಿದೆ | | |
| 5 | ಉಡುಪಿ | ಉಡುಪಿ | 4702-00-101-5-02-139 ಪಶ್ಚಿಮವಾಹಿನಿ ಯೋಜನೆ | ಹೇರೂರು ಗ್ರಾಮದ ಸೇತುವೆ ಬಳಿ ಮಡಿಸಾಲು ಹೊಳೆಗೆ ಉಪ್ಪು ನೀರು ತಡೆ ಅಣೆಕಟು ನಿರ್ಮಾಣ | 3500.00 | 4732.46 | 169.84 | | | 4902.3 | ಪೂರ್ಣಗೊಂಡಿದೆ | | |
| 6 | ಉಡುಪಿ | ಉಡುಪಿ | 4702-00-101-5-02-139 ಪಶ್ಚಿಮವಾಹಿನಿ ಯೋಜನೆ | ಹಂದಾಡಿ-ಕುಮ್ರಗೋಡಿನಿಂದ ಬಾರ್ಕೂರು-ಬೆಣ್ಣೆಕುದ್ರು ಮಧ್ಯದಲ್ಲಿ ಸೀತಾನದಿಗೆ ಅಡ್ಡಲಾಗಿ ಸೇತುವೆ ಸಹಿತ ಉಪ್ಪುನೀರು ತಡೆ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿ | 16025.00 | 8.95 | 1198.00 | 520.48 | 10.38 | 1737.805 | | ಪ್ರಗತಿಯಲ್ಲಿದೆ | |

| ಕ್ರ.ಸಂ. | ಜಿಲ್ಲೆ | ವಿಧಾನಸಭಾ ಕ್ಷೇತ್ರ | ಲೆಕ್ಕಶೀರ್ಷಿಕೆ | ಕಾಮಗಾರಿ ಹೆಸರು | ಅಂದಾಜು ಮೊತ್ತ | ವೆಚ್ಚ | | | | ಒಟ್ಟು ವೆಚ್ಚ (7+8+9+10) | ಕಾಮಗಾರಿಯ ಹಂತ | | ಷರಾ |
|---|---|---|---|---|---|---|---|---|---|---|---|---|---|
| | | | | | | ಮಾರ್ಚ್-2023 ರವರೆಗೆ | 2023-24 | 2024-25 | 2025-26 (ಡಿಸೆಂಬರ್ ಅಂತ್ಯದವರೆಗೆ) | | ಪೂರ್ಣಗೊಂಡಿದೆ | ಪ್ರಗತಿಯಲ್ಲಿದೆ | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 |
| 7 | ಉಡುಪಿ | ಉಡುಪಿ | 4702-00-101-5-02-139 ಪಶ್ಚಿಮವಾಹಿನಿ ಯೋಜನೆ-ಖಾರ್‌ಲ್ಯಾಂಡ್ ನಿರ್ಮಾಣ | ಕಲ್ಯಾಣಪುರ ಗ್ರಾಮ ಪಂಚಾಯತ್ ವ್ಯಾಪ್ತಿಯ ಮೂಡುತೋನ್ಸೆ ಎಂಬಲ್ಲಿ ಖಾರ್‌ಲ್ಯಾಂಡ್ ನಿರ್ಮಾಣ ಕಾಮಗಾರಿ. | 200.00 | | 0.00 | 0.94 | 11.13 | 12.07 | | ಪ್ರಗತಿಯಲ್ಲಿದೆ | |
| 8 | ಉಡುಪಿ | ಕುಂದಾಪುರ | 4702-00-101-5-02-139 ಪಶ್ಚಿಮವಾಹಿನಿ ಯೋಜನೆ | ಪಾಂಡೇಶ್ವರ-ಮೂಡಹಡು ಮತ್ತು ಬಾರ್ಕೂರು-ಬೆಣ್ಣೆಕುದ್ರು ಮಧ್ಯದಲ್ಲಿ ಸೀತಾನದಿಗೆ ಅಡ್ಡಲಾಗಿ ಸೇತುವೆ ಸಹಿತ ಉಪ್ಪುನೀರು ತಡೆ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿ | 15100.00 | 8.95 | 1976.70 | 1927.83 | 802.83 | 4716.31 | | ಪ್ರಗತಿಯಲ್ಲಿದೆ | |
| 9 | ಉಡುಪಿ | ಕುಂದಾಪುರ | 4702-00-101-5-02-139 ಪಶ್ಚಿಮವಾಹಿನಿ ಯೋಜನೆ-ಖಾರ್‌ಲ್ಯಾಂಡ್ ನಿರ್ಮಾಣ | ಕೋಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಕೋಡಿ ಕನ್ಯಾಣ ಎಂಬಲ್ಲಿ ಸೀತಾ ನದಿಯ ಆಯ್ದ ಭಾಗಗಳಲ್ಲಿ ಖಾರ್‌ಲ್ಯಾಂಡ್ ನಿರ್ಮಾಣ ಕಾಮಗಾರಿ. | 200.00 | | 0.85 | 54.36 | 21.15 | 76.36 | ಪೂರ್ಣಗೊಂಡಿದೆ | | |
| 10 | ಉಡುಪಿ | ಕುಂದಾಪುರ | 4702-00-101-5-02-139 ಪಶ್ಚಿಮವಾಹಿನಿ ಯೋಜನೆ-ಖಾರ್‌ಲ್ಯಾಂಡ್ ನಿರ್ಮಾಣ | ಕೋಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಕೋಡಿ ಬೇಂಗ್ರೆ ಎಂಬಲ್ಲಿ ಸೀತಾ ನದಿಯ ಆಯ್ದ ಭಾಗಗಳಲ್ಲಿ ಖಾರ್‌ಲ್ಯಾಂಡ್ ನಿರ್ಮಾಣ ಕಾಮಗಾರಿ. | 200.00 | | 0.85 | 33.79 | 35.00 | 69.64 | ಪೂರ್ಣಗೊಂಡಿದೆ | | |
| 11 | ಉಡುಪಿ | ಕುಂದಾಪುರ | 4702-00-101-5-02-139 ಪಶ್ಚಿಮವಾಹಿನಿ ಯೋಜನೆ-ಖಾರ್‌ಲ್ಯಾಂಡ್ ನಿರ್ಮಾಣ | ಟಿ.ಟಿ ರೋಡ್ ಕೈಪಾಡಿ ಗರಡಿ ಎಂಬಲ್ಲಿ ಪಾಲಾಡಿ ನದಿಯ ಆಯ್ದ ಭಾಗಗಳಲ್ಲಿ ಖಾರ್‌ಲ್ಯಾಂಡ್ ನಿರ್ಮಾಣ ಕಾಮಗಾರಿ. | 200.00 | | 0.85 | 5.81 | | 6.66 | | ಪ್ರಗತಿಯಲ್ಲಿದೆ | |
| 12 | ಉಡುಪಿ | ಬೈಂದೂರು | 4702-00-101-5-02-139 ಪಶ್ಚಿಮವಾಹಿನಿ ಯೋಜನೆ | ಪಡುವರಿ ಗ್ರಾಮದ ಸುಬ್ಬರಾಡಿ ಎಂಬಲ್ಲಿ ಎರಡು ಉಪ್ಪು ನೀರು ತಡೆ ಅಣೆಕಟ್ಟು ರಚನೆ ಕಾಮಗಾರಿ. | 3500.00 | 5208.71 | 0.00 | 100.73 | | 5309.44 | ಪೂರ್ಣಗೊಂಡಿದೆ | | |
| 13 | ಉಡುಪಿ | ಬೈಂದೂರು | 4702-00-101-5-02-139 ಪಶ್ಚಿಮವಾಹಿನಿ ಯೋಜನೆ | ಯಡ್ತರೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಹೂಳ್ಕಾರಿಹಿತ್ಲು ಎಂಬಲ್ಲಿ ಉಪ್ಪುನೀರು ತೆಡೆ ಆಣೆಕಟ್ಟು ನಿರ್ಮಾಣ ಕಾಮಗಾರಿ. | 160.00 | 134.36 | 0.00 | 2.00 | | 136.36 | ಪೂರ್ಣಗೊಂಡಿದೆ | | |
| 14 | ಉಡುಪಿ | ಬೈಂದೂರು | 4702-00-101-5-02-139 ಪಶ್ಚಿಮವಾಹಿನಿ ಯೋಜನೆ | ಕಿರಿಮಂಜೇಶ್ವರ  ಗ್ರಾಮ ಪಂಚಾಯತ್ ವ್ಯಾಪ್ತಿಯ ಹೊಸಹಿತ್ಲು ಎಂಬಲ್ಲಿ ಉಪ್ಪುನೀರು ತಡೆ ಅಣೆಕಟ್ಟು ಆಣೆಕಟ್ಟು ನಿರ್ಮಾಣ ಕಾಮಗಾರಿ. | 115.00 | 75.95 | 0.00 | 37.45 | 2.00 | 115.4 | ಪೂರ್ಣಗೊಂಡಿದೆ | | |
| 15 | ಉಡುಪಿ | ಬೈಂದೂರು | 4702-00-101-5-02-139 ಪಶ್ಚಿಮವಾಹಿನಿ ಯೋಜನೆ-ಖಾರ್‌ಲ್ಯಾಂಡ್ ನಿರ್ಮಾಣ | ಉಡುಪಿ ಜಿಲ್ಲೆ, ಕುಂದಾಪುರ ತಾಲೂಕಿನ ಹಕ್ಲಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಬಗ್ವಾಡಿ ಹೊಳೆಕೆರೆ ದೈವದ ಮನೆಯಿಂದ ಬಗ್ವಾಡಿ ಬ್ರೀಡ್ ಹತ್ತಿರ ಮತ್ತು ಹಕ್ಲಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ತೋಪ್ಲು ಎಂಬಲ್ಲಿ ಖಾರ್‌ಲ್ಯಾಂಡ್ ನಿರ್ಮಾಣ ಕಾಮಗಾರಿ. | 175.00 | | 0.00 | 12.07 | 25.00 | 37.07 | ಪೂರ್ಣಗೊಂಡಿದೆ | | |
| 16 | ಉಡುಪಿ | ಬೈಂದೂರು | 4702-00-101-5-02-139 ಪಶ್ಚಿಮವಾಹಿನಿ ಯೋಜನೆ-ಖಾರ್‌ಲ್ಯಾಂಡ್ ನಿರ್ಮಾಣ | ಉಡುಪಿ ಜಿಲ್ಲೆ, ಕುಂದಾಪುರ ತಾಲೂಕಿನ ಹೆಮ್ಮಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಸಂತೋಷನಗರದಿಂದ ಬುಗರಿಕಡು ಮತ್ತು ಮೂವತ್ತುಮುಡಿ ಮುತ್ತು ಪೂಜಾರ್ತಿ ಮನೆಯಿಂದ ಮರ್ಲಿ ಪೂಜಾರ್ತಿ ಮನೆ ತನಕ ಖಾರ್‌ಲ್ಯಾಂಡ್ ನಿರ್ಮಾಣ ಕಾಮಗಾರಿ. | 175.00 | | 0.82 | 126.48 | | 127.3 | ಪೂರ್ಣಗೊಂಡಿದೆ | | |

| ಕ್ರ.ಸಂ. | ಜಿಲ್ಲೆ | ವಿಧಾನಸಭಾ ಕ್ಷೇತ್ರ | ಲೆಕ್ಕಶೀರ್ಷಿಕೆ | ಕಾಮಗಾರಿ ಹೆಸರು | ಅಂದಾಜು ಮೊತ್ತ | ವೆಚ್ಚ | | | | ಒಟ್ಟು ವೆಚ್ಚ (7+8+9+10) | ಕಾಮಗಾರಿಯ ಹಂತ | | ಷರಾ |
|---|---|---|---|---|---|---|---|---|---|---|---|---|---|
| | | | | | | ಮಾರ್ಚ್-2023 ರವರೆಗೆ | 2023-24 | 2024-25 | 2025-26 (ಡಿಸೆಂಬರ್ ಅಂತ್ಯದವರೆಗೆ) | | ಪೂರ್ಣಗೊಂಡಿದೆ | ಪ್ರಗತಿಯಲ್ಲಿದೆ | |
| **1** | **2** | **3** | **4** | **5** | 6 | 7 | 8 | 9 | 10 | 11 | 12 | 13 | 14 |
| 17 | ಉಡುಪಿ | ಬೈಂದೂರು | 4702-00-101-5-02-139 ಪಶ್ಚಿಮವಾಹಿನಿ ಯೋಜನೆ-ಖಾರ್‌ಲ್ಯಾಂಡ್ ನಿರ್ಮಾಣ | ಉಡುಪಿ ಜಿಲ್ಲೆ, ಕುಂದಾಪುರ ತಾಲೂಕಿನ ತಲ್ಲೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಹೊಸಹೊಕ್ಲು ಮನೆ ಪರಿಸರದಿಂದ ಸಂಸಾಲ್‌ಕಡು ಎಂಬಲ್ಲಿ ಮತ್ತು ತ್ರಾಸಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಕಲ್ಲಾನಿ ಶಾಲೆ ಹಿಂಭಾಗದಲ್ಲಿ ಖಾರ್‌ಲ್ಯಾಂಡ್ ನಿರ್ಮಾಣ ಕಾಮಗಾರಿ. | 125.00 | | 0.00 | 24.90 | | 24.9 | ಪೂರ್ಣಗೊಂಡಿದೆ | | |
| 18 | ಉಡುಪಿ | ಬೈಂದೂರು | 4702-00-101-5-02-139 ಪಶ್ಚಿಮವಾಹಿನಿ ಯೋಜನೆ-ಖಾರ್‌ಲ್ಯಾಂಡ್ ನಿರ್ಮಾಣ | ಉಡುಪಿ ಜಿಲ್ಲೆ, ಕುಂದಾಪುರ ತಾಲೂಕಿನ ಹೊಸಾಡು ಗ್ರಾಮ ಪಂಚಾಯತ್ ವ್ಯಾಪ್ತಿಯ ಅರಾಟೆ ಬ್ರೀಡ್ಜ್‌ನಿಂದ ಕುಂಜಿಬೈಲು ಎಂಬಲ್ಲಿ, ಬೈಂದೂರು ಗ್ರಾಮದ ಮಯ್ಯಾಡಿ ಕಳಿಮನೆ ಹತ್ತಿರ, ಮತ್ತು ಕಿರಿಮಂಜೇಶ್ವರ ಗ್ರಾಮ ಪಂಚಾಯತ್ ವ್ಯಾಪ್ತಿಯ ಕೊಡೇರಿ ಕಂಬಳಗದ್ದೆ ಹತ್ತಿರ ಇರುವ ಎಡಮಾವಿನ ಹೊಳೆಯ ಬದಿ ಖಾರ್‌ಲ್ಯಾಂಡ್ ನಿರ್ಮಾಣ ಕಾಮಗಾರಿ. | 125.00 | | 0.00 | 90.08 | 2.00 | 92.08 | | ಪ್ರಗತಿಯಲ್ಲಿದೆ | |
| **18** | | | | **ಒಟ್ಟು ಉಡುಪಿ ಜಿಲ್ಲೆ** | **41704.80** | **11365.06** | **3427.64** | **2965.34** | **958.71** | **18716.74** | **13** | **5** | **0** |
| **23** | | | | **ಒಟ್ಟು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆ** | **65867.41** | **33919.26** | **3933.33** | **3701.36** | **1190.63** | **42744.57** | **16** | **7** | **0** |
| **2023-24 ನೇ ಸಾಲಿನ ಹೊಸ ಕಾಮಗಾರಿಗಳು** | | | | | | | | | | | | | |
| ಯಾವುದೂ ಇರುವುದಿಲ್ಲ. | | | | | | | | | | | | | |
| **2024-25 ನೇ ಸಾಲಿನ ಹೊಸ ಕಾಮಗಾರಿಗಳು** | | | | | | | | | | | | | |
| ಯಾವುದೂ ಇರುವುದಿಲ್ಲ. | | | | | | | | | | | | | |